# ಚಾಂಪಿಯನ್ ಮುನಿಯಪ್ಪ!

**ಟೆಂಟ್‌ನಲ್ಲಿ ಬಾಲ್ಯ ಕಳೆದ ಈ ಹುಡುಗನ, ಅಪ್ಪ-ಅಮ್ಮ ಕೂಲಿ ಕಾರ್ಮಿಕರು. ಈತನಿಗೆ ಓದು-ಬರಹ ಗೊತ್ತೇ ಇಲ್ಲ. ಆದರೆ ಕನಸುಗಳಿಗೆ ಬಡತನವಿರಲಿಲ್ಲ. ಮನದ ತುಂಬಾ ಗಾಲ್ಫ್ ತುಂಬಿಕೊಂಡಿತ್ತು. ಗಾಲ್ಫ್ ಚೆಂಡು ಹೆಕ್ಕಿ ಕೊಡುತ್ತಲೇ ಆಟ ಕಲಿತ ಮುನಿಯಪ್ಪ ಇವತ್ತು ಗಾಲ್ಫ್‌ಲೋಕದ ದೊಡ್ಡ ಚಾಂಪಿಯನ್!**

■ ಕೆ.ಓಂಕಾರ ಮೂರ್ತಿ



ಅಮ್ಮ ಚಿನ್ನಮ್ಮ, ಪತ್ನಿ ಮುನಿಯಮ್ಮ, ಪುತ್ರಿ ಗೋಪಿಕಾ ಹಾಗೂ ಅಪ್ಪ ಚಿನ್ನಸ್ವಾಮಿ ಜೊತೆ ಸಿ.ಮುನಿಯಪ್ಪ.

'ಮುಂದೊಂದು ದಿನ ಪ್ರತಿಫಲ ಸಿಗಬಹುದು' ಎಂದು ಆತನ ಅವತ್ತಿನ ಕ್ರೂರ ಬಡತನ ಹೇಳಿತ್ತೋ ಇಲ್ಲವೋ ಗೊತ್ತಿಲ್ಲ! ಅಥವಾ ಮುಂದೊಂದು ದಿನ ಚಾಂಪಿಯನ್ ಆಗುವ ಹಠ ಹುಟ್ಟಿಸಲೆಂದೇ ಆಗ ಬಡತನ ಬಂದಿತ್ತಾ..? ಗೊತ್ತಿಲ್ಲ!

ಆದರೆ ಆ ಹುಡುಗನ ಬಳಿ ಮಿತಿ ಇಲ್ಲದಷ್ಟು ಕನಸುಗಳು ಇದ್ದವು. ಕೊನೆ ಇಲ್ಲದಷ್ಟು ಆಸೆ ಕಂಗಳಲ್ಲಿ ತುಂಬಿತ್ತು. ಕೆಲಸ ಮಾಡುತ್ತಲೇ ಆ ಹುಡುಗ ತನ್ನ ಕನಸುಗಳಿಗೆ ಬಣ್ಣ ಹಚ್ಚಲು ಶುರು ಮಾಡಿದ್ದ! ಬಡ ಕುಟುಂಬದ ಪಯಣ ಸಾಗಿಸಲು ಕರ್ನಾಟಕ ಗಾಲ್ಫ್ ಕೋರ್ಸ್ (ಕೆಜಿಎ)ನಲ್ಲಿ ಆತ ಕೆಲಸಕ್ಕೆ ಸೇರಿದಾಗ ಒಂದು ಗಂಟೆಗೆ ಒಂದು ರೂಪಾಯಿ ಕೂಲಿ ಕೊಡುತ್ತಿದ್ದರು.

ಆದರೆ ಆ ವ್ಯಕ್ತಿಯ ಜೀವನವೇ ಈಗ ಬದಲಾಗಿ ಹೋಗಿದೆ. ಕೆಲ ವರ್ಷಗಳ ಹಿಂದೆಯಷ್ಟೇ ಟೆಂಟ್‌ನಲ್ಲಿದ್ದ ಆತ ಈಗ ಲಕ್ಷಾಧಿಪತಿ!

ಆ ವ್ಯಕ್ತಿ ಚಾಂಪಿಯನ್ ಮುನಿಯಪ್ಪ. ಭಾರತದ ಪ್ರತಿಭಾವಂತ ಗಾಲ್ಫ್ ಆಟಗಾರ. ಗುಡಂಗಾವ್‌ನಲ್ಲಿ ಇತ್ತೀಚೆಗೆ ನಡೆದ 'ಇಂಡಿಯನ್ ಓಪನ್ ಗಾಲ್ಫ್' ಟೂರ್ನಿಯಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಮುನಿಯಪ್ಪ ಚಾಂಪಿಯನ್ ಆಗಿದ್ದಾರೆ. ಏಷ್ಯನ್ ವೃತ್ತಿಪರ ಗಾಲ್ಫ್ ಟೂರ್ನಿಯಲ್ಲಿ ಅವರು ಜಯಿಸಿದ ಮೊದಲ ಪ್ರಶಸ್ತಿ ಇದು. ಇದರಿಂದ ಅವರಿಗೆ 92 ಲಕ್ಷ ರೂಪಾಯಿ ಬಹುಮಾನ ಲಭಿಸಿದೆ.

(61ನೇ ಪುಟ ನೋಡಿ)

ಸಂದಿ ನೋವನ್ನು ನಿವಾರಿಸಿ...... ಕ್ಷಣಮಾತ್ರದಲ್ಲಿ..



ಸೊಂಟನೋವು, ಬೆನ್ನುನೋವು, ಉಳುಕು, ಸಂದಿನೋವು ಮಾಂಸಖಂಡಗಳ ನೋವು, ಸೆಳೆತ ಇತ್ಯಾದಿಗಳ ನಿವಾರಣೆಗೊಳಿಸುವ ಸ್ಪೆಷಲಿಸ್ಟ್

ಬೈದ್ಯನಾಥ್

ರೂಮಾ ಆಯಿಲ್

ನಯವಾಗಿ ಹಚ್ಚಿರಿ.. ಶೀಘ್ರ ಆರಾಮ ಪಡೆಯಿರಿ